ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	126
ಸದಸ್ಯರ ಹೆಸರು	:	ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	02-03-2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	(see below)

ಪ್ರಾಥಮಿಕ ಶಿಕ್ಷಣ:

ಮಾರ್ಚ್-2019ರ ಅಂತ್ಯಕ್ಕೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ವೃಂದದ ಒಟ್ಟು 24891 ಖಾಲಿ ಹುದ್ದೆಗಳಿದ್ದು, ಈ ಪೈಕಿ ಸಹ ಶಿಕ್ಷಕರ ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ-22150.

ಈಗಾಗಲೇ ರಾಜ್ಯದ ಸರ್ಕಾರಿ ಶಾಲೆಗಳ ಖಾಲಿ ಹುದ್ದೆಗಳಲ್ಲಿ, ಒಟ್ಟು 10565 ಪದವೀಧರ ಶಿಕ್ಷಕರನ್ನು ನೇಮಿಸಿಕೊಳ್ಳಲು ಜಿಲ್ಲಾವಾರು ಅಧಿಸೂಚನೆ ಹೊರಡಿಸಲಾಗಿತ್ತು. ಇದರಲ್ಲಿ, ಒಟ್ಟು 1994 ಅಭ್ಯರ್ಥಿಗಳು ಆಯ್ಕೆಯಾಗಿರುತ್ತಾರೆ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ 2019-20ನೇ ಸಾಲಿಗೆ ಮಂಜೂರಾಗಿದ್ದ 22150 ಅತಿಥಿ ಶಿಕ್ಷಕರ ಸಂಖ್ಯೆಯ ಪೈಕಿ ಒಟ್ಟು 17220 ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಶಾಲಾ ಮಕ್ಕಳ ಕಲಿಕೆಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಿದೆ.

ಪ್ರೌಢ ಶಿಕ್ಷಣ:

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ದಿನಾಂಕ:01.10.2019 ರಲ್ಲಿದ್ದಂತೆ ಒಟ್ಟು 5065 ವಿವಿಧ ವೃಂದದ ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

ಕ್ರ ಸಂ	ಪದನಾಮ	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು	ಖಾಲಿ ಹುದ್ದೆ
1	ಸಹ ಶಿಕ್ಷಕರು	42328	38077	4251
2	ದೈಹಿಕ ಶಿಕ್ಷಣ ಶಿಕ್ಷಕರು	4941	4303	638
3	ವಿಶೇಷ ಶಿಕ್ಷಕರು	5091	4915	176
	ಒಟ್ಟು	**52360**	**47295**	**5065**

ಖಾಲಿ ಇರುವ 5065 ಹುದ್ದೆಗಳಲ್ಲಿ, ಪದವೀಧರ ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ಮೂಲಕ ತುಂಬುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಶೀಘ್ರದಲ್ಲಿಯೇ 2285 ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು 2019-20ನೇ ಸಾಲಿನಲ್ಲಿ 3451 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ ಹಾಗೂ ಶಾಲಾ ಶೈಕ್ಷಣಿಕ ಚಟುವಟಿಕೆಗೆ ತೊಂದರೆಯಾಗದಂತೆ ಕ್ರಮವಹಿಸಿದೆ.

ಪ್ರಶ್ನೆ		ಉತ್ತರ
ಆ)	2018-19ನೇ ಸಾಲಿನಿಂದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ನಿರ್ಮಾಣಗೊಂಡಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು? ಈ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು?	ವಿವಿಧ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಮಂಜೂರು ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ: (ರೂ.ಲಕ್ಷಗಳಲ್ಲಿ)

(ರೂ.ಲಕ್ಷಗಳಲ್ಲಿ)

ವರ್ಷ	ಯೋಜನೆ	ಕೊಠಡಿಗಳ ಸಂಖ್ಯೆ/ಅನುದಾನ				ಒಟ್ಟು
		ಪ್ರಾಥಮಿಕ ಶಾಲೆ	ಅನುದಾನ	ಪ್ರೌಢ ಶಾಲೆ	ಅನುದಾನ	
2018-19	ರಾಜ್ಯವಲಯ, ವಿಶೇಷ ಪ್ಯಾಕೇಜ್/ ವಿಶೇಷ ಅಭಿವೃದ್ಧಿ ಯೋಜನೆ	1627	11825.00	1280	15582.00	**27407.00**
2019-20	ರಾಜ್ಯವಲಯ, ವಿಶೇಷ ಪ್ಯಾಕೇಜ್/ ವಿಶೇಷ ಅಭಿವೃದ್ಧಿ ಯೋಜನೆ	645	6828.60	328	5161.75	**11990.35**
2019-20	ನಬಾರ್ಡ್ ಸಹಯೋಗದ ಆರ್.ಐ.ಡಿ.ಎಫ್-25 (ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಶಾಲೆಗಳು)	6044	68919.00	425	6888.00	**75807.00**

(ಇ) ರಾಜ್ಯದಲ್ಲಿ ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡ, ಮೂಲಭೂತ ಸೌಕರ್ಯದ (ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಇತ್ಯಾದಿ) ಕೊರತೆಯಿದೆ (ವಿವರ ನೀಡುವುದು); ಅಭಿವೃದ್ಧಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ರಾಜ್ಯದಲ್ಲಿರುವ ಒಟ್ಟಾರೆ ಶಾಲೆಗಳ ಸಂಖ್ಯೆ – 48533

ಸ್ವಂತ ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ – 1145

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ – 455

ಬಾಡಿಗೆ ರಹಿತ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ – 690

ಮೂಲಭೂತ ಸೌಕರ್ಯಗಳ ಕೊರತೆಯಿರುವ ಶಾಲೆಗಳ ವಿವರ ಈ ಕೆಳಕಂಡಂತಿದೆ: (UDISE 2019-20ರ ಅಂಕಿ ಅಂಶವನ್ನು ಆಧರಿಸಿದೆ)

ಕ್ರ. ಸಂ.	ವಿವರ	ಕೊರತೆಯಿರುವ ಶಾಲೆಗಳ ಸಂಖ್ಯೆ
1	ಕುಡಿಯುವ ನೀರು	97
2	ಶೌಚಾಲಯ	840
3	ಆಟದ ಮೈದಾನ	21205
4	ಕಾಂಪೌಂಡ್	9757

ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ.

ಮಹಾತ್ಮ ಗಾಂಧಿ ನರೇಗಾ ಹಾಗೂ ಸ್ವಚ್ಛ ನೀರು ಮತ್ತು ನೈರ್ಮಲ್ಯ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ದುರಸ್ಥಿ ಹಾಗೂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

2019-20ನೇ ಸಾಲಿನಲ್ಲಿ ಸ್ವಚ್ಛಭಾರತ ಯೋಜನೆಯಡಿ 720 ಶೌಚಾಲಯಗಳನ್ನು ತಲಾ ರೂ.2.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಾಣ ಕೈಗೊಳ್ಳಲಾಗಿದೆ. ~~ಹಾಗೂ~~ ಮಹಾತ್ಮಾಗಾಂಧಿ ನರೇಗಾ ಯೋಜನೆಯ "ಸುಭದ್ರ ಶಾಲೆ" ಕಾರ್ಯಕ್ರಮದಡಿ 6825 ಸರ್ಕಾರಿ ಶಾಲೆಗಳಿಗೆ ಆವರಣ ಗೋಡೆಯನ್ನು ರೂ.90.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುದಾನ ಒದಗಿಸಲಾಗಿರುತ್ತದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

2020-21ನೇ ಸಾಲಿನಲ್ಲಿ, ಸರ್ಕಾರಿ ಶಾಲೆಗಳಲ್ಲಿ ಆಟದ ಮೈದಾನ, ಶೌಚಾಲಯ ಮತ್ತು ಕಾಂಪೌಂಡ್ ನಿರ್ಮಾಣ ಕಾಮಗಾರಿಗಳನ್ನು ಸಹ ಮಹಾತ್ಮಾಗಾಂಧಿ ನರೇಗಾ ಯೋಜನೆಯ "ಸುಭದ್ರ ಶಾಲೆ" ಕಾರ್ಯಕ್ರಮದಡಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇಪಿ 48 ಯೋಸಕ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:126.

SL. NO	DISTRICT NAME	TOTAL NO OF SCHOOLS	NO. OF SCHOOLS NEED TOILETS	NO. OF SCHOOLS NEED DRINKING WATER	NO OF SCHOOLS NEED PLAY GROUND	NO OF SCHOOLS NEED COMPOUND	NO OF SCHOOLS NOT HAVING OWN BUILDING		
							Rented	Rent Free	Total
1	BAGALKOTE	1461	52	2	523	219	24	26	50
2	BAGALORE NORTH	556	7	2	272	73	39	25	64
3	BANGALORE RURAL	1151	6	4	597	150	1	12	13
4	BANGALORE SOUTH	965	16	12	503	149	18	36	54
5	BELAGAVI	1549	19	1	617	346	32	41	73
6	BELLARY	1835	53	1	884	402	4	22	26
7	BIDAR	1438	15	0	670	419	10	21	31
8	CHAMARAJANAGAR	865	6	1	419	125	8	8	16
9	CHIKBALLAPURA	1578	32	4	870	339	10	26	36
10	CHIKKODI	1957	61	3	438	486	26	33	59
11	CHIKMAGALORE	1491	20	5	498	208	2	10	12
12	CHITRADURGA	1772	43	6	854	364	15	23	38
13	DAKSHINA KANNADA	1077	1	0	190	176	5	9	14
14	DAVANAGERE	1217	42	2	494	142	22	18	40
15	DHARWAD	872	24	0	328	173	30	49	79
16	GADAG	730	8	0	210	61	4	10	14
17	HASSAN	2583	18	3	1230	558	4	14	18
18	HAVERI	1324	36	5	529	212	8	4	12
19	KALBURGI	2078	64	0	1074	676	13	36	49
20	KODAGU	428	1	0	78	37	0	6	6
21	KOLAR	1944	33	1	1147	415	24	22	46
22	KOPPAL	1128	14	2	419	147	2	18	20
23	MADHUGIRI	1365	5	0	603	162	0	6	6
24	MANDYA	1819	18	6	734	227	4	26	30
25	MYSORE	2140	38	16	1044	171	24	67	91
26	RAICHUR	1629	54	0	714	455	0	4	4
27	RAMANAGAR	1370	10	0	796	279	4	25	29
28	SHIMOGA	2039	23	5	933	237	6	15	21
29	SIRSI	1210	15	6	478	273	14	13	27
30	TUMKUR	2201	21	7	1300	449	23	12	35
31	UDUPI	693	2	2	155	222	23	2	25
32	UTTARA KANNADA	1016	0	0	438	195	20	6	26
33	VIJAYAPURA	1990	47	1	680	814	34	26	60
34	YADGIR	1062	36	0	486	396	2	19	21
	TOTAL	**48533**	**840**	**97**	**21205**	**9757**	**455**	**690**	**1145**